# ಶ್ರೀರಾಮಕೃಷ್ಣರು ಮತ್ತು ಅವರ ಭಕ್ತೆಯರು

ಮಾತಾ ತ್ಯಾಗಮಯಿ

ಶ್ರೀರಾಮಕೃಷ್ಣರು ಅನಂತ ಬಗೆಗಳಲ್ಲಿ ವಿಕಸನಗೊಳ್ಳುವ ಸಾಧ್ಯತೆಗಳುಳ್ಳ ಅನಂತ ಆಧ್ಯಾತ್ಮಿಕ ಭಾವಗಳ ಮೂರ್ತರೂಪ. ಬ್ರಹ್ಮಜ್ಞಾನಕ್ಕೂ ಒಂದು ಮಿತಿಯನ್ನು ಕಲ್ಪಿಸಬಹುದೇನೋ, ಆದರೆ ಶ್ರೀರಾಮಕೃಷ್ಣರ ಮನಸ್ಸಿನ ಆಳ-ವೈಶಾಲ್ಯಗಳನ್ನು ಅಳೆಯಲಾಗದು ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

ಶ್ರೀರಾಮಕೃಷ್ಣರನ್ನು ಯಾರು ತಾನೆ ಅರ್ಥಮಾಡಿಕೊಳ್ಳಬಲ್ಲರು? ಅವರ ಸಾಧನೆಯ ತೀವ್ರತೆ-ನಿಖರತೆ, ವೈಜ್ಞಾನಿಕ ದೃಷ್ಟಿ, ಆಳ-ವೈಶಾಲ್ಯದಿಂದೊಡಗೂಡಿದ ಆಧ್ಯಾತ್ಮಿಕ ಅರಿವು, ಅವರ ಅಸಂಖ್ಯ ಭಾವಗಳು, ಅವರ ಚಾರಿತ್ರ್ಯದ ವಿವಿಧ ಮುಖಗಳು, ಅವರ ಮಹಾನ್ ಮಾನವಾನುಕಂಪೆಯಿಂದ ಒಡಮೂಡಿದ ಅಮೃತವಾಣಿಗಳು, ವೇದಸಮ ವಚನಗಳು, ಮಾನವೀಯ ಸ್ಪಂದನದ ಜೊತೆಜೊತೆಗೆ ಆ ದೈವೀ ಭೂಮ ಚಾರಿತ್ರ್ಯ- ಅವರ ಜೀವನದ ಪ್ರತಿಯೊಂದು ಅಂಶವೂ ಅದ್ಭುತ-ಅಗಾಧ! ಧರ್ಮಜೀವನದ ಸಮಗ್ರ ದರುಶನ ಇಲ್ಲಿದೆ! ಆಧ್ಯಾತ್ಮಿಕ ಪಥದ ಅಂತರಂಗದ, ಅತೀತದ ಅಮೃತತ್ವದ ಆಮೂಲಾಗ್ರ ಅನ್ವೇಷಣೆ ಮತ್ತು ರಸಾಸ್ವಾದನೆ ಇಲ್ಲಿದೆ!

**ಶಿರವ ಗಗನದೊಳಿರಿಸಿ ಚರಣಗಳೆರಡ ಭೂತಲದಿ**
**ಗುರು ಹಿಮಾಚಲದಂತೆ ನಿಂತಿಹೆ ಶಾಂತಿಯಾಶ್ರಯನೆ**

ಆ ಶಾಂತಿಯಾಶ್ರಯವನ್ನು ಹೊಂದಿ ಪುಳಕಿತರಾದವರಲ್ಲಿ ಬಡವ-ಬಲ್ಲಿದ, ವಿವೇಕಿ-ಅವಿವೇಕಿ, ಸ್ತ್ರೀ-ಪುರುಷ, ಭಾರತೀಯ-ವಿದೇಶೀಯ ಎಂಬ ಯಾವ ಭೇದವಿಲ್ಲದೆ ಪ್ರತಿಯೊಬ್ಬರೂ ಭಾಗಿಗಳಾಗಿದ್ದರು. ಅವರಲ್ಲಿ ಹಲಕೆಲವು ಭಕ್ತೆಯರು ದಕ್ಷಿಣೇಶ್ವರ ದೇವನಿಲಯದ ಪರಮ ಯೋಗೀಶ್ವರನ ಪಂಚ ಅಮೃತದ ಪಾತ್ರೆಯಿಂದ ಅಮೃತವನ್ನು ಪಾನಗೈದು ಅಮರರಾಗಿರುವರು. ಶ್ರೀರಾಮಕೃಷ್ಣರು ಮತ್ತು ಅವರ ಭಕ್ತೆಯರ ಈ ಪಾವನ ಕಥೆ ನಮ್ಮ ಬಾಳಸೊಡರುಗಳನ್ನು ಹೊತ್ತಿಸಿಕೊಳ್ಳುವಲ್ಲಿ ಅತ್ಯಂತ ಸಹಕಾರಿ.

ಅನೇಕ ಸ್ತ್ರೀಯರು ಶ್ರೀರಾಮಕೃಷ್ಣರ ಬಳಿ ಬಂದು ಸಾಂತ್ವನವನ್ನೂ ಬೋಧನೆಯನ್ನೂ ಪಡೆಯುತ್ತಿದ್ದರು. ಅವರಲ್ಲಿ ಅನೇಕರು ಆಧ್ಯಾತ್ಮಿಕವಾಗಿ ಬಹು ಉನ್ನತ ಹಂತವನ್ನು ಏರಿದರು. ಅಂತಹ ಕೆಲವರ ಪರಿಚಯವನ್ನು ಹೃದಯಂಗಮವಾಗಿ ಚಿತ್ರಿಸಿರುವ ಪೂಜ್ಯ ಮಾತಾಜಿಯವರು ಬೆಂಗಳೂರಿನ ಭವತಾರಿಣಿ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉತ್ತಮ ಲೇಖಕರು, ವಾಗ್ಮಿಗಳು.



ಭಾರತೀಯ ಸ್ತ್ರೀ ಆಧ್ಯಾತ್ಮಿಕವಾಗಿ ಸತ್ವಶಾಲಿಯಾಗಿದ್ದಾಳೆ. ಯಾವ ರಾಷ್ಟ್ರ ತಾಯಿ ಸೀತೆಯ ಚಾರಿತ್ರ್ಯವನ್ನು ಉತ್ತುಂಗ ಶಿಖರದಲ್ಲಿ ನಿಲ್ಲಿಸಿತೋ, ಗಾರ್ಗಿ-ಮೈತ್ರೇಯಿ ಮತ್ತಿತರ ಬ್ರಹ್ಮವಾದಿನಿಯರನ್ನು ಹಾಗೂ ಮಂತ್ರದ್ರಷ್ಟಾರರಾದ ಮಹಿಳಾ ಮುನಿಗಳನ್ನು ನಿರ್ಮಾಣ ಮಾಡಿತೋ, ಯಾವ ರಾಷ್ಟ್ರ ತನ್ನ ಸಾಮಾನ್ಯ ಸ್ತ್ರೀಯರನ್ನೂ ತ್ಯಾಗ-ಪವಿತ್ರತೆ-ಕಷ್ಟಸಹಿಷ್ಣುತೆಯ ಸಾಕಾರಮೂರ್ತಿಯಾದ ತಾಯಿಯಾಗಿ ಚಿತ್ರಿಸಿತೋ, ಅಂತಹ ನಮ್ಮ ಭರತವರ್ಷದಲ್ಲಿ ಪ್ರಭು ಶ್ರೀರಾಮಕೃಷ್ಣರು ತಮ್ಮ ಅವತರಣದಿಂದ ಸ್ತ್ರೀಜನರ ಆಧ್ಯಾತ್ಮಿಕ ವಿಕಾಸಕ್ಕೆ ಮಹಿಮಾಪೂರ್ಣ ಕೊಡುಗೆಯನ್ನು ನೀಡಿದ್ದಾರೆ. ಅಂದಿನ ಸಾಮಾಜಿಕ ಸನ್ನಿವೇಶಗಳ ಹಿನ್ನೆಲೆಯಲ್ಲಿ ಬಂಧಿತಳಂತೆ, ಅಜ್ಞೆಯಂತೆ, ಮೌಢ್ಯತೆಯ ರಾಶಿಯಂತೆ ಗೋಚರಿಸಿದ ಭಾರತೀಯ ನಾರಿ, ಅಂದಿನ ಸಾಮಾಜಿಕ ಕಟ್ಟುಕಟ್ಟಳೆಗಳ ಬಿಗಿಯನ್ನು ದಾಟಿ ಬಂದು, ಶ್ರೀರಾಮಕೃಷ್ಣರನ್ನು ಸಂಧಿಸಬೇಕಾದರೆ ಅದಕ್ಕಾಗಿ ಬಹುದೊಡ್ಡ ತಪಸ್ಸಿನ ಬೆಲೆಯನ್ನು ತೆತ್ತಿದ್ದಾಳೆ ಎನ್ನೋಣವೇ ಅಥವಾ ಪ್ರಭು ಶ್ರೀರಾಮಕೃಷ್ಣರ ಆಕರ್ಷಣೆ ಅಷ್ಟು ಅಗಾಧವಾಗಿತ್ತೆಂದು ಅರಿತು ಅದಕ್ಕೆ ಶಿರಬಾಗೋಣವೇ? ಅಂತಹ ಬಿಗುವಿನ ವಾತಾವರಣದ ನಡುವೆಯೂ, ಬಹಳಷ್ಟು ಮಹಿಳೆಯರು ಶ್ರೀರಾಮಕೃಷ್ಣರ ಸಂಪರ್ಕದಿಂದ ತಮ್ಮ ಜೀವನಮಾರ್ಗವನ್ನು ಊರ್ಜಿತಗೊಳಿಸಿ

ಕೊಂಡಿದ್ದರು–ಬಲರಾಮನ ಕುಟುಂಬದ ಮಹಿಳೆಯರು, ಮನಮೋಹನನ ತಾಯಿ, ಸ್ವಾಮಿ ಪ್ರೇಮಾನಂದರ ತಾಯಿ–ಇಂಥವರು ಇನ್ನೂ ಇದ್ದಿರಬೇಕು. ನಮಗೆ ಅವರ ವಿವರ ಸಿಗುವುದಿಲ್ಲವಷ್ಟೇ. ಭಕ್ತೆ ನಿಸ್ತಾರಿಣಿ ದೇವಿ, ಹಾಗೆ ನೋಡಿದರೆ ಸಾಮಾನ್ಯ ಸ್ತ್ರೀ–ಆದರೆ ಆಕೆ ಶ್ರೀರಾಮಕೃಷ್ಣರಿಗೆ ಬಹಳ ಸಲ ಉಣಬಡಿಸಿದಳು, ತನ್ನ ಮಗನನ್ನು ಶ್ರೀರಾಮಕೃಷ್ಣರ ಪಾದಗಳಿಗೆ ಅರ್ಪಿಸುವ ತ್ಯಾಗ–ಶರಣಾಗತಿ ಭಾವವನ್ನು ತಾಳಿದ್ದಳು. ಹೆಚ್ಚೇಕೆ, ಶ್ರೀರಾಮ ಕೃಷ್ಣರ ಪರಮಕೃಪೆಯಿಂದ ತನ್ನ ಇಷ್ಟದೇವತೆ ಶ್ರೀರಾಮಚಂದ್ರನ ದರ್ಶನವನ್ನು ಪಡೆದಿರಬೇಕಾದರೆ ಹಾಗೂ ತನ್ನ ಕೊನೆಗಾಲದಲ್ಲಿ ಶ್ರೀರಾಮಕೃಷ್ಣರ ಭಾವಚಿತ್ರವನ್ನು ಅಪ್ಪಿಕೊಂಡು ಅವರ ಪಾವನ ನಾಮವನ್ನೇ ಸ್ಮರಿಸುತ್ತ, ಪ್ರಾಣತ್ಯಾಗ ಮಾಡಿದಳು ಎಂದಮೇಲೆ, ಶ್ರೀರಾಮಕೃಷ್ಣಶಕ್ತಿ ಯಾವ ಮಟ್ಟದಲ್ಲಿ ಅವರ ಬಳಿಬಂದ ಪ್ರತಿಯೊಬ್ಬ ಭಕ್ತೆಯ ಜೀವನದಲ್ಲಿಯೂ ಉತ್ಕರ್ಷವನ್ನು, ಶಾಂತಿ–ಸಮಾಧಾನದ ಮೆರುಗನ್ನು ತಂದಿದೆ ಎಂಬುದನ್ನು ನಾವು ಕಲ್ಪಿಸಿಕೊಳ್ಳಬಹುದು. ಶ್ರೀರಾಮಕೃಷ್ಣರು ತಾವು ಓರ್ವ ಪುರುಷರಾಗಿ ಭಕ್ತೆಯರಿಗೆ ಸಹಾಯ ನೀಡಿಲ್ಲ, ತಾವೇ ಓರ್ವ ಸ್ತ್ರೀಯಾಗಿ, ಅವರ ಭಾವದ ಅಂತರಂಗವರಿತ ವ್ಯಕ್ತಿಯಾಗಿ, ಅವರ ಇಷ್ಟದೇವತೆಯೇ ಆಗಿ ಭಕ್ತೆಯರಿಗೆ ನವಜೀವನ ಪ್ರದಾನ ಮಾಡಿದರು.

**ಗೋಪಾಲೇರ್ ಮಾ**

ಶ್ರೀರಾಮಕೃಷ್ಣರು ಬಾರಿಬಾರಿಗೂ ಭಗವಂತನೊಬ್ಬನೇ ಸಾರ ವಸ್ತು, ಭಗವತ್ ಸಾಕ್ಷಾತ್ಕಾರವೇ ನಮ್ಮ ಜೀವನದ ಗುರಿ ಎಂದು ಸಾರಿ ಸಾರಿ ಹೇಳಿದವರು. ಅಂತಹ ಸಾರವಸ್ತುವಿನ ಅನುಭವ ವನ್ನು ಗೋಪಾಲೇರ್ ಮಾ ಶ್ರೀರಾಮಕೃಷ್ಣರ ಬಳಿ ಬರುವಾಗಲೇ ಪಡೆದಿದ್ದಳು. ನೋಡಿದರೆ ಬಡವಿ, ವಿಧವೆ, ಸಂಪ್ರದಾಯಸ್ಥ ಮಡಿವಂತ ಭಾವನೆಗಳಿಂದ ಬಿಗಿಯಲ್ಪಟ್ಟ ಜೀವ. ಆದರೆ ಪ್ರಭು ಭಕ್ತಿಗೊಲಿಯುವ ಹೃದಯದಮೃತಾನಂದ ರೂಪಿಣಿ. ಎಂತಹ ತ್ಯಾಗ, ತಪಸ್ಸು, ಏಕನಿಷ್ಠೆ ಅವಳಲ್ಲಿ ಇತ್ತು! ತನ್ನ ಜಪಮಣಿ ಯೊಂದಿಗೆ ಗಂಟೆಗಳು, ದಿನಗಳು, ವರುಷಗಳು ಉರುಳಿದ್ದೆ ಗೊತ್ತಾಗಲಿಲ್ಲ –ಮೂವತ್ತು ವರುಷಗಳು ಸಾಧನೆಯಲ್ಲಿ ಕಳೆದವು. ವೃದ್ಧಾಪ್ಯದ ಕಾಲದಲ್ಲಿ ಅವಳಿಗೆ ತನ್ನ ಪ್ರಾಣನಾಥನ ದರ್ಶನ ವಾಯಿತು. ಪ್ರಭು ಶ್ರೀರಾಮಕೃಷ್ಣರ ದರ್ಶನ ಮೊದಲು ಆಯಿತು. ಆ ಪಾವನ ರೂಪವನ್ನು ಸ್ಪರ್ಶಿಸಲು ಹೋದೊಡನೆ ಅವರು ಬಾಲಗೋಪಾಲನಾದರು. ಸೊಬಗಿನ ರಾಶಿಯಾಗಿ, ನಗೆಮೊಗದ ಅರಸನಾಗಿ ಆ ಬಾಲಕನು ಅಂಬೆಗಾಲಿಟ್ಟು ಅವಳನ್ನು ಸಮೀಪಿಸಿ "ಅಮ್ಮಾ, ಬೆಣ್ಣೆ ಕೊಡು" ಎಂದು ಕೇಳಿದನು. "ಕಂದ, ನಾನು ಬಡವಿ, ನಿನಗೆ ಬೆಣ್ಣೆಯನ್ನು ಎಲ್ಲಿಂದ ತಂದು ಉಣಬಡಿಸಲಿ?" ಎಂದರೂ, ಬಾಲಕನು ಕೇಳಲಿಲ್ಲ, ಬೆಣ್ಣೆಗಾಗಿ ಕಾಡುತ್ತಲೇ ಇದ್ದನು. ಗೋಪಾಲೇರ್ ಮಾ ತನ್ನ ನೆಲುವಿನಿಂದ ಕೆಲವು ಕಾಯಿಉಂಡೆಗಳನ್ನು ತೆಗೆದುಕೊಟ್ಟು ಜಪವನ್ನು ಮುಂದು ವರಿಸಲು ನೋಡಿದಳು. ಅವನು ಜಪಮಾಡಲು ಬಿಟ್ಟರಲ್ಲವೆ? ತೊಡೆಯ ಮೇಲೆ ಏರಿದನು, ಜಪಮಾಲೆಯನ್ನು ಹಿಡಿದೆಳೆದನು, ಭುಜದ ಮೇಲೇರಿದನು, ಅಂಬೆಗಾಲಿಟ್ಟು ಕೋಣೆ ತುಂಬ ಓಡಾಡಿದನು. ನಸುಕಾಗುತ್ತಲೇ ಗೋಪಾಲೇರ್ ಮಾ ಅವನನ್ನು ಎದೆಗಪ್ಪಿಕೊಂಡು ದಕ್ಷಿಣೇಶ್ವರಕ್ಕೆ ಹುಚ್ಚಿಯಂತೆ ಓಡಿದಳು.

ಗೋಪಾಲೇರ್ ಮಾ ದಕ್ಷಿಣೇಶ್ವರಕ್ಕೆ ಬಂದಾಗ ಶ್ರೀರಾಮ ಕೃಷ್ಣರಲ್ಲಿ ಗೋಪಾಲಭಾವ ತಾನೇತಾನಾಗಿ ಜಾಗೃತವಾಯಿತು. ನೇರವಾಗಿ ಬಂದು ಭಾವಮತ್ತ ಸ್ಥಿತಿಯಲ್ಲಿ ಗೋಪಾಲೇರ್ ಮಾಳ ತೊಡೆಯ ಮೇಲೆ ಕುಳಿತುಕೊಂಡರು. ಅವಳು ಪ್ರೇಮಾಶ್ರು ಸುರಿಸುತ್ತಿದ್ದಾಳೆ, ತಾನು ತಂದಿರುವ ಬೆಣ್ಣೆ, ಮಿಠಾಯಿಯನ್ನು ಅವರಿಗೆ ತಿನ್ನಿಸುತ್ತಾಳೆ. ಸ್ವಲ್ಪ ಹೊತ್ತಿನಲ್ಲಿ ಶ್ರೀರಾಮಕೃಷ್ಣರು ಪ್ರಕೃತಿಸ್ಥರಾಗಿ ತಮ್ಮ ಮಂಚದ ಮೇಲೆ ಹೋಗಿ ಕುಳಿತರು. ಆದರೆ, ಗೋಪಾಲೇರ್‌ಮಾಳ ಭಾವ ಅಷ್ಟು ಬೇಗ ಶಾಂತವಾಗು ವಂತಿರಲಿಲ್ಲ. ಅವಳು ನರ್ತಿಸತೊಡಗಿದಳು, "ಬ್ರಹ್ಮ ನರ್ತಿಸು ತ್ತಿದ್ದಾನೆ, ವಿಷ್ಣು ನರ್ತಿಸುತ್ತಿದ್ದಾನೆ" ಎಂದು ಕೋಣೆಯಲ್ಲೆಲ್ಲ ಕುಣಿದಾಡಿದಳು.

ಶ್ರೀರಾಮಕೃಷ್ಣರು ಅವಳ ಬಗ್ಗೆ ಹೇಳಿದರು, "ಅವಳ ಮನಸ್ಸೀಗ ಗೋಪಾಲ ಲೋಕದಲ್ಲಿದೆ." ತನ್ನ ಗೋಪಾಲನೇ ಶ್ರೀರಾಮಕೃಷ್ಣ ರಾಗಿರುವುದಾಗಿಯೂ, ಶ್ರೀರಾಮಕೃಷ್ಣರೇ ಗೋಪಾಲನಾಗಿ ಲೀಲೆಯಾಡುತ್ತಿರುವುದಾಗಿಯೂ ಅವಳು ಅರಿತಳು. ಅಂದು ದಿನವಿಡೀ ದಕ್ಷಿಣೇಶ್ವರದಲ್ಲಿದ್ದು, ಕಾಮಾರಹಾಟಿಗೆ (ತಾನಿರುವ ಸ್ಥಳ) ಹೊರಟುನಿಂತಾಗ ಗೋಪಾಲನೂ ಅವಳೊಂದಿಗೆ ಹೊರಟನು. ಅಂದಿನಿಂದ ಸರಿಸುಮಾರು ೬೦ ದಿನಗಳವರೆಗೆ ಇದೇ ಕಥೆ– ಗೋಪಾಲ, ಗೋಪಾಲೇರ್ ಮಾಳೊಂದಿಗೆ ನಿಂತರೆ, ಕುಳಿತರೆ, ಮಲಗಿದರೆ, ಓಡಾಡುತ್ತಿದ್ದರೆ, ಕೆಲಸ–ಕಾರ್ಯ ಮಾಡುತ್ತಿದ್ದರೆ ಉದ್ದಕ್ಕೂ ಜೊತೆಜೊತೆಯಲ್ಲಿಯೇ ಇರುತ್ತಾನೆ – ಉದ್ದಕ್ಕೂ ಮಾತನಾಡುತ್ತಾನೆ, ಕಣ್ಣರಳಿಸಿ ನೋಡುತ್ತಾನೆ, ಜಪ ಮಾಡಲು ಬಿಡಲೊಲ್ಲ, ಬಗೆಬಗೆಯ ತುಂಟಾಟಗಳನ್ನು ಮಾಡುತ್ತಾನೆ. ಬಳಿಕ ಆ ಭಾವದ ತೀವ್ರತೆ ಕ್ರಮೇಣ ಕಡಿಮೆ ಯಾಯಿತು. ಆದರೆ, ಅವಳು ಬಯಸಿದಾಗಲೆಲ್ಲ ಅವಳಿಗೆ ಬಾಲಕನ ದರ್ಶನವಾಗುತ್ತಿತ್ತು.

ಅಷ್ಟೊಂದು ದೀರ್ಘ ಕಾಲ ತನಗೆ ದೈವೀ ಅನುಭವ ವಾದುದು, ತದನಂತರವೂ ತನ್ನ ಶರೀರವು ಬದುಕುಳಿದುದು ಶ್ರೀರಾಮಕೃಷ್ಣರ ಪರಮಕೃಪೆಯಿಂದಲೇ ಎಂದು ಗೋಪಾಲೇರ್ ಮಾ ಅರಿತಳು. ಶ್ರೀರಾಮಕೃಷ್ಣರನ್ನು ಕೇಂದ್ರವಾಗಿಟ್ಟುಕೊಂಡು ತನ್ನ ಮುಂದಿನ ಜೀವನವನ್ನು ಅವಳು ರೂಪಿಸಿಕೊಂಡಳು. ಶ್ರೀರಾಮಕೃಷ್ಣರ ಪ್ರಭಾವದಿಂದ ಅವಳ ದೃಷ್ಟಿಕೋನ ಅದೆಷ್ಟು ವಿಶಾಲವಾಯಿತು ಎಂದರೆ, ಯಾರು ಅತ್ಯಂತ ಮಡಿವಂತ ಳಾಗಿದ್ದಳೊ, ಯಾರು ಹಿಂದೆ ತಾನು ಬಳಸಿದ ಸೌಟನ್ನು ಶ್ರೀಮಾತೆಯವರೇ ಸ್ಪರ್ಶಿಸಿದರೂ ಅದನ್ನೆತ್ತಿ ಗಂಗೆಗೆ ಎಸೆದಿದ್ದಳೊ, ಅಂತಹ ಗೋಪಾಲೇರ್ ಮಾ, ತನ್ನ ಕೊನೆಗಾಲದಲ್ಲಿ ವಿದೇಶೀಯ ಳಾದ ನಿವೇದಿತಾಳ ಜೊತೆಯಿದ್ದು ಅವಳ ಸೇವೆಯನ್ನು

ಸ್ವೀಕರಿಸುತ್ತಾಳೆಂದರೆ ಎಂಥ ಹೃದಯವೈಶಾಲ್ಯ ಅವಳಲ್ಲಿ ಬೆಳೆದಿತ್ತು! ಇನ್ನೊಮ್ಮೆ ಅವಳು ಜಗನ್ನಾಥ ರಥಯಾತ್ರೆಗೆಂದು ಕೊಲ್ಕತಾದ ಬಳಿಯಿರುವ ಮಾಹೇಶ್ ಎಂಬ ಸ್ಥಳಕ್ಕೆ ಹೋದಾಗ ಅಲ್ಲಿ ಅವಳಿಗೆ ಸಕಲ ಸ್ತ್ರೀ–ಪುರುಷರೂ ಗೋಪಾಲನೇ ಆಗಿ ಕಾಣಿಸಿದರು. ಅದನ್ನು ಕಂಡು ಅವಳು ಆನಂದೋನ್ಮತ್ತಳಾದಳು. ಸಕಲ ಮಾನವತೆಯನ್ನು ಸಪ್ರೇಮಭಾವದಿಂದ, ಭಗವದ್ಭಾವ ದಿಂದ ಕಾಣುವ ಮನಃಸ್ಥಿತಿ ಅವಳದಾಗಿತ್ತು. ಅವಳು ಕೊನೆಯುಸಿರು ಎಳೆಯುವಾಗ ಅವಳ ಬಳಿಯಿದ್ದುದು ಎರಡೇ ವಸ್ತುಗಳು – ತನ್ನ ಜಪಮಣಿ ಮತ್ತು ಶ್ರೀರಾಮಕೃಷ್ಣರ ಭಾವಚಿತ್ರ. ಧನ್ಯೆ ಗೋಪಾಲೇರ್ ಮಾ! ಪ್ರಭುಕೃಪೆ ಆ ಪಾತ್ರದ ಮೂಲಕ ಹರಿದ ಬಗೆ ಅತ್ಯಂತ ವಿಶೇಷವಾದುದು!

### ಗೌರೀ ಮಾ

ಇನ್ನೋರ್ವ ಭಕ್ತೆ ಗೌರೀ ಮಾ. ಆಕೆ ಸಂನ್ಯಾಸಿನಿ. ಭಾರತದ ಉದ್ದಗಲಕ್ಕೂ ಓಡಾಡಿ ತಪಸ್ಸನ್ನಾಚರಿಸಿದವಳು, ಅಪಾರ ಲೋಕಾನುಭವ ಹೊಂದಿದವಳು, ಅಮೂಲ್ಯ ಆಧ್ಯಾತ್ಮಿಕ ಅನುಭವಗಳನ್ನು ಪಡೆದವಳು. ಅವಳು ಬಲರಾಮನ ಮನೆಯಲ್ಲಿ ಉಳಿದುಕೊಂಡಿದ್ದಳು. ಅಂದು ತನ್ನ ಇಷ್ಟದೇವತೆಯ ಸಾಲಿ ಗ್ರಾಮಕ್ಕೆ ಪೂಜೆ ಸಲ್ಲಿಸುತ್ತಿರುವಾಗ, ಪೂಜಾವೇದಿಕೆಯಲ್ಲಿ ಎರಡು ಹೆಜ್ಜೆಗುರುತುಗಳನ್ನು ಕಂಡಳು. ಆ ಹೆಜ್ಜೆಗಳು ತನ್ನನ್ನು ಸೆಳೆಯುತ್ತಿರುವಂತೆ ಅವಳಿಗೆ ಅನುಭವವಾಯಿತು. ಮರುದಿನ, ಆ ಆಕರ್ಷಣೆಯನ್ನು ತಾಳಲಾರದೆ ದಕ್ಷಿಣೇಶ್ವರಕ್ಕೆ ಹೋಗಿ ಶ್ರೀರಾಮಕೃಷ್ಣರಿಗೆ ಪ್ರಣಾಮ ಮಾಡಿದಾಗ, ತಾನು ಕಂಡ ಎರಡು ಹೆಜ್ಜೆಗಳು ಅವರವೇ ಎಂದು ಗುರುತಿಸಿದಳು. ಶ್ರೀರಾಮಕೃಷ್ಣರಲ್ಲಿಗೆ ಮತ್ತೊಮ್ಮೆ ಹೋದಳು, ಮಗದೊಮ್ಮೆ ಹೋದಳು, ಅಲ್ಲಿಗೇ ಸೇರಿದವಳಾದಳು.

ಶ್ರೀಚೈತನ್ಯದೇವನು ನವದ್ವೀಪದಲ್ಲಿ ಪ್ರೇಮವರ್ಷಣಗೈದ ಅನುಭವವನ್ನು ಪಡೆಯಬೇಕೆಂಬ ಇಚ್ಛೆ ಗೌರೀ ಮಾಳಿಗೆ ಇದ್ದಿತು. ಒಂದು ದಿನ ಗೌರೀ ಮಾ, ಶ್ರೀರಾಮಕೃಷ್ಣರಿಗೆಂದು ಅಡಿಗೆಯನ್ನು ತಯಾರಿಸಿ ತಟ್ಟೆಯಲ್ಲಿ ಬಡಿಸಿಕೊಂಡು ಅವರ ಕೋಣೆಗೆ ಹೋದಳು. ಕೋಣೆಯಲ್ಲಿ ಹಲವು ಭಕ್ತರಿದ್ದರು. ಅವರಲ್ಲಿ ಚೈತನ್ಯನ ಭಕ್ತ ಕೇದಾರನಾಥನೂ ಒಬ್ಬ. ಶ್ರೀರಾಮ ಕೃಷ್ಣರು ಇಬ್ಬರಿಗೂ ಪರಸ್ಪರರನ್ನು ಪರಿಚಯ ಮಾಡಿಕೊಟ್ಟರು. ಅವರು ಒಬ್ಬರನ್ನೊಬ್ಬರು ನೋಡುವುದೇ ತಡ, ಇಬ್ಬರೊಳಗೂ ಅದಾವುದೋ ಶಕ್ತಿಯ ಪ್ರೇರಣೆಯಿಂದ ಭಾವೋದ್ದೀಪನ ವಾಯಿತು; ಇಬ್ಬರೂ ಧಾರಾಕಾರವಾಗಿ ಪ್ರೇಮಾಶ್ರುಗಳನ್ನು ಸುರಿಸ ತೊಡಗಿದರು. ಶ್ರೀರಾಮಕೃಷ್ಣರೂ ಕೂಡ, ಊಟಕ್ಕೆ ಕುಳಿತವರು ಭಾವೋನ್ಮತ್ತರಾಗಿ ಎದ್ದು ನಿಂತರು. ಭಕ್ತರೊಬ್ಬರು ಶ್ರೀರಾಮಕೃಷ್ಣರ ಸುತ್ತ ನರ್ತಿಸತೊಡಗಿದರು. ನಿಮಿಷಾರ್ಧದಲ್ಲಿ ಕೆಲವರು ಆನಂದಾಧಿಕ್ಯದಿಂದ ನರ್ತಿಸಿದರು, ಕೆಲವರು ನಕ್ಕರು, ಕೆಲವರು ಅತ್ತರು, ಕೆಲವರು ಹಾಡಿ ಕುಣಿದರು. ಹೀಗೆ ಆ ದಿನ ಶ್ರೀರಾಮ ಕೃಷ್ಣರು ಎಲ್ಲರಿಗೂ ಚೈತನ್ಯಪ್ರೇಮದ ಅನುಭವ ಮಾಡಿಸಿಕೊಟ್ಟರು.

ಇನ್ನೊಂದು ಪ್ರಮುಖ ಕಾರ್ಯವನ್ನು ಶ್ರೀರಾಮಕೃಷ್ಣರು ಗೌರೀ ಮಾಳಿಂದ ಮಾಡಿಸಿದರು. ಒಂದು ದಿನ ಶ್ರೀರಾಮಕೃಷ್ಣರು ತೋಟದಲ್ಲಿರುವಾಗ, "ನಾನು ಜೇಡಿಮಣ್ಣಿಗೆ ನೀರು ಹಾಕುತ್ತಿದ್ದೇನೆ. ಅದನ್ನು ಕಲಸುವ ಕೆಲಸ ನಿನ್ನದು" ಎಂದು ಸೂಚ್ಯವಾಗಿ ಹೇಳಿದರು. "ಈ ದೇಶದ ಮಹಿಳೆಯರು ಎಂತಹ ದುಃಸ್ಥಿತಿಯಲ್ಲಿ ದ್ದಾರೆ, ಅವರ ಮೇಲ್ಮೆಗಾಗಿ ನೀನು ದುಡಿಯಬೇಕು" ಎಂದರು. ಗೌರೀ ಮಾ ಮೊದಲು ಶ್ರೀರಾಮಕೃಷ್ಣರ ಮಾತಿಗೆ ಒಪ್ಪಿಗೆ ನೀಡದಿದ್ದರೂ ಮುಂದೆ ಶ್ರೀರಾಮಕೃಷ್ಣರ ಮಾನವಾನುಕಂಪೆಯ ತರಂಗಗಳು ಅವಳ ಹೃದಯದಲ್ಲಿ ಕೃಷಿಗೈದು, ಮಹಿಳೆಯರ ಲೌಕಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಸಮುನ್ನತಿಗೆಂದು ಮುಡಿಪಾ ಗಿರುವ **'ಶ್ರೀಶಾರದೇಶ್ವರಿ ಆಶ್ರಮ'** ಎಂಬ ಶಿಕ್ಷಣ ಸಂಸ್ಥೆ ಅವಳ ನಿರಂತರ ತ್ಯಾಗ–ಪ್ರಯತ್ನ–ನಿಷ್ಠೆಯ ಫಲವಾಗಿ ತಲೆಯೆತ್ತಿ ನಿಂತಿತು. ತಮ್ಮ ಬಳಿಬಂದ ಸ್ತ್ರೀಯರು ಜೀವನಸಾರ್ಥಕ್ಯ ವನ್ನು ಪಡೆದರೆ ಸಾಲದು, ಲೋಕಸಂಗ್ರಹಕ್ಕಾಗಿಯೂ ಶ್ರಮಿಸು ವಂತಾಗಬೇಕು ಎಂಬ ಕಳಕಳಿ ಶ್ರೀರಾಮಕೃಷ್ಣರದು. ಹೀಗೆ ಶ್ರೀರಾಮಕೃಷ್ಣಶಕ್ತಿ ಗೌರೀ ಮಾಳ ಮೂಲಕ ಅಸಂಖ್ಯ ಸ್ತ್ರೀಯರಲ್ಲಿ ಲೌಕಿಕ–ಆಧ್ಯಾತ್ಮಿಕ ಜಾಗೃತಿಯನ್ನುಂಟುಮಾಡಲು ಕಾರಣ ವಾಯಿತು. ಶ್ರೀರಾಮಕೃಷ್ಣರು ಇಷ್ಟದೇವತೆಯಾಗಿ ಅವಳ ಜೀವನದ ಆಧಾರವಾದರು, ಯುಗಪ್ರವರ್ತಕ ಅವತಾರರಾಗಿ ಅವಳನ್ನು ತ್ಯಾಗ ಮತ್ತು ಸೇವಾದರ್ಶಗಳಲ್ಲಿ ತೊಡಗಿಸಿದರು.

### ಯೋಗಿನ್ ಮಾ

ಯೋಗಿನ್ ಮಾ ಶ್ರೀಮಂತ ಮನೆಯಲ್ಲಿ ಹುಟ್ಟಿದವಳು. ಮದುವೆಯಾದುದೂ ಶ್ರೀಮಂತರ ಮನೆಗೇ. ಆದರೆ ಪತಿ ಕುಡುಕ, ಲಂಪಟ. ಇವಳ ಎಲ್ಲ ಪ್ರಯತ್ನದ ತರುವಾಯವೂ ಅವನು ಹಾಳಾದನು. ತನ್ನ ಬದುಕನ್ನು ತಹಬಂದಿಗೆ ತರುವ ಪ್ರಯತ್ನದಲ್ಲಿ ಇವಳು ತವರುಮನೆಗೆ ಬಂದಳು. ಈ ಕಠಿಣ ಸಂದರ್ಭದಲ್ಲಿಯೇ ಅವಳು ಶ್ರೀರಾಮಕೃಷ್ಣರ ಸಂಪರ್ಕಕ್ಕೆ ಬಂದದ್ದು. ಅದೆಂತಹ ಸಂಪರ್ಕವದು! **ಯದ್ಗತ್ವಾ ನ ನಿವರ್ತಂತೇ, ತದ್ಧಾಮ ಪರಮಂ ಮಮ** (ಒಮ್ಮೆ ಭಗವಂತನ ವಲಯದೊಳು ನುಗ್ಗಿದರೆ ಮರಳಿ ಬರುವ ಮಾತೇ ಇಲ್ಲ). ಅಂದು ಯೋಗಿನ್ ಮಾ ನಡೆದು ಕೊಂಡು ದಕ್ಷಿಣೇಶ್ವರಕ್ಕೆ ಹೋಗಿದ್ದಾಳೆ. ಅವಿನ್ನೂ ಭೇಟಿ ಯಾದ ಆರಂಭದ ದಿನಗಳು. ಮನಸ್ಸು ಹಳೆಯ ಜಾಡಿನಿಂದ ಹೊರಬಂದಿಲ್ಲ; ನೂರೆಂಟು ಚಿಂತೆ, ಕ್ಲೇಶ, ತಾಪಗಳಿಂದ ಮನಸ್ಸು ಅಶಾಂತವಾಗಿದೆ, ಚಂಚಲವಾಗಿದೆ. ಅಂದು ಶ್ರೀರಾಮ ಕೃಷ್ಣರನ್ನು ನೋಡುವುದೇ ತಡ, ಅವಳಿಗೇ ಗೊತ್ತಿಲ್ಲದಂತೆ ವಿಚಿತ್ರ ರೀತಿಯಲ್ಲಿ ದುಃಖ, ದುಗುಡಗಳೆಲ್ಲ ಮಾಯವಾಯಿತು, ಹೃದಯ ಹಗುರವಾಯಿತು. ಅವಳು ತೋಟಕ್ಕೆ ಹೋಗಿ, ಹೂವುಗಳನ್ನು ತನ್ನ ಸೆರಗಿನಲ್ಲಿ ತೆಗೆದುಕೊಂಡು ಬಂದಳು. ಶ್ರೀರಾಮಕೃಷ್ಣರು ತಮ್ಮ ಕೋಣೆಯ ಆಚೆ, ಗೋಡೆಗೆ ಒರಗಿ ಅನ್ಯಮನಸ್ಕರಾಗಿ ನಿಂತಿದ್ದರು; ಅವರು ಇವಳನ್ನು ಪ್ರೇಮಪೂರ್ಣ ದೃಷ್ಟಿಯಿಂದ ನೋಡಿದರು, ಅವಳು ಹೂವುಗಳನ್ನು ಅವರ ಪದತಲದಲ್ಲಿ

ಅರ್ಪಿಸಿದಳು. ಶ್ರೀರಾಮಕೃಷ್ಣರ ಮನಸ್ಸು ಉನ್ನತಾವಸ್ಥೆಗೇರಿತು, ತಮ್ಮ ಪಾದಗಳನ್ನೆತ್ತಿ ಅವಳ ತಲೆಯ ಮೇಲೆ ಇಟ್ಟರು, ಅವಳು ಆ ಪಾದಗಳನ್ನೆತ್ತಿ ಎದೆಯ ಮೇಲೂ ಇರಿಸಿಕೊಂಡಳು. ಸಾಕ್ಷಾತ್ ಗಯಾ ಕ್ಷೇತ್ರದ ಅಧಿಪತಿಯಾದ ಗದಾಧರನ ಪಾದಗಳು ತನ್ನ ಹೃದಯದಲ್ಲಿ ನೆಲೆಸಿವೆ ಎಂಬ ದೃಢವಿಶ್ವಾಸ ಅವಳ ದಾಯಿತು. ಒಂದು ನೊಂದ ಜೀವಕ್ಕೆ ಎಂತಹ ಉನ್ನತಿಯ ಹಾದಿಯನ್ನು ತೆರೆದು ತೋರಿದರು ಶ್ರೀರಾಮಕೃಷ್ಣರು!

ಶ್ರೀರಾಮಕೃಷ್ಣರ ಮಾರ್ಗದರ್ಶನದಲ್ಲಿ ಅವಳು ರಾಮಾಯಣ, ಭಾಗವತ, ಚೈತನ್ಯ ಚರಿತಾಮೃತ ಮತ್ತಿತರ ಶಾಸ್ತ್ರಗ್ರಂಥಗಳನ್ನು ಅಧ್ಯಯನ ಮಾಡಿದಳು. ಶ್ರೀರಾಮಕೃಷ್ಣರ ಸೇವೆಯನ್ನು ಮಾಡಿದಳು, ಶ್ರೀಮಾತೆಯವರ ಸೇವೆಯನ್ನು ಅವರ ಕೊನೆಯ ದಿನದವರೆಗೂ ಮಾಡಿದಳು. ತದೇಕಚಿತ್ತದಿಂದ ಪ್ರತಿನಿತ್ಯವೂ ಜಪವನ್ನು ಮಾಡಿ ಜಪಪರಾಯಣಳಾದಳು; ಜಪದ ಮೂಲಕವೇ ಸಿದ್ಧಿಯನ್ನು ಪಡೆದಳು. ಹೀಗೆ ಶ್ರೀರಾಮಕೃಷ್ಣರಲ್ಲಿ ಶರಣಾಗಿ ಅವಳು ಸಂತುಷ್ಟಳಾದಳು, ಸಂತಳಾದಳು.

ಯೋಗಿನ್ ಮಾ ಒಮ್ಮೆ ಶ್ರೀರಾಮಕೃಷ್ಣರನ್ನು ಕೇಳುತ್ತಾಳೆ, "ನಾನು ನನ್ನ ಮನೋಬುದ್ಧಿಗಳನ್ನು ಅವನಲ್ಲಿಟ್ಟು ಅವನನ್ನು ಕರೆಯಬಯಸುತ್ತೇನೆ. ಆದರೆ ಈ ಮನಸ್ಸನ್ನು ನಿಗ್ರಹಿಸುವುದು ಬಹಳ ಕಠಿಣ, ಏನು ಮಾಡಲಿ?" ಅದಕ್ಕೆ ಶ್ರೀರಾಮಕೃಷ್ಣರು ನೇರವಾಗಿ ಹೀಗೆ ಉತ್ತರಿಸಿದರು, "ಅವನಲ್ಲಿ ಶರಣಾಗು. ಜಗತ್ತಿನಲ್ಲಿ ಉಂಡು ಎಸೆದ ಎಂಜಲೆಲೆಯಂತೆ ಇರಬೇಕು. ಎಂಜಲೆಲೆ ಹೇಗೆ ಬೀಸುವ ಗಾಳಿಗೆ ಸಿಲುಕಿ, ಎಲ್ಲೆಂದರಲ್ಲಿ ಹೋಗಿ ಬೀಳುತ್ತದೆಯೊ, ಹಾಗೆ ನಾವು ಭಗವದಿಚ್ಛಾನುಸಾರ ಬಾಳಬೇಕು." ಹೀಗೆ ಬಾಳುವುದು ಅತ್ಯಂತ ಕಠಿಣ. ಆದರೆ ಯೋಗಿನ್ ಮಾ ಆ ರೀತಿ ಬದುಕುವಲ್ಲಿ ಯಶಸ್ವಿಯಾದಳು. ಇನ್ನೊಮ್ಮೆ ಶ್ರೀರಾಮಕೃಷ್ಣರು ಅವಳಿಗೆ ಹೇಳಿದರು, "ನೀನು ಇದನ್ನು (ತಮ್ಮನ್ನು) ನೋಡಿದ್ದೀಯೆ, ಉಣಿಸಿದ್ದೀಯೆ, ಇದಕ್ಕೆ ಸೇವೆ ಮಾಡಿದ್ದೀಯೆ, ಇನ್ನೇನು ತಾನೆ ಬೇಕು? ನೀನು ಚಿಂತಿಸಬೇಕಾಗಿಲ್ಲ."

ಯೋಗಿನ್ ಮಾಳ ಜೀವನ, ನಮಗೂ ಶ್ರೀರಾಮಕೃಷ್ಣರ ಸ್ಮರಣೆ ಹಾಗೂ ಸೇವೆ ಶರಣಾಗತಿಗಳ ಮೂಲಕ, ಎಲ್ಲಿದ್ದರೂ, ಎಷ್ಟೇ ಕಷ್ಟದಲ್ಲಿದ್ದರೂ ಸಾರ್ಥಕ ಬದುಕನ್ನು ನಡೆಸಬಹುದು ಎಂಬ ಭರವಸೆಯನ್ನು ನೀಡುತ್ತದೆ.

**ಉಪಸಂಹಾರ**

ಯೋಗಿನ್ ಮಾಳಂತೆಯೇ ಗೋಲಾಪ್ ಮಾ ಕೂಡ ನೊಂದು ಬೆಂದ ಜೀವ. ಆದರೆ, ಶ್ರೀರಾಮಕೃಷ್ಣರೆಂಬ ಪರುಷ ಮಣಿಯ ಸ್ಪರ್ಶದಿಂದ ಹಳೆಯ ದುಗುಡಗಳನ್ನೆಲ್ಲ ಕನಸಿನಂತೆ ಕಂಡು, ಅವನ್ನು ಮೀರಿ ನಿಂತು, ಅವಳು ಶ್ರೀರಾಮಕೃಷ್ಣ, ಶ್ರೀಮಾತೆಯವರ ಸೇವೆ ಹಾಗೂ ಜಪಸಾಧನೆಯ ಮೂಲಕ, ಜೀವನದ ಸಾರ್ಥಕ್ಯವನ್ನು ಕಂಡುಕೊಂಡಳು. ತಮ್ಮ ಅಣ್ಣನ ಮಗಳು ಲಕ್ಷ್ಮಿಯ ಕುರಿತಾಗಿಯೂ ಶ್ರೀರಾಮಕೃಷ್ಣರ ಕೃಪೆ ವಿಶೇಷವಾಗಿತ್ತು. ಅವಳೂ ಶ್ರೀರಾಮಕೃಷ್ಣರನ್ನು ಕೇಂದ್ರವಾಗಿಟ್ಟುಕೊಂಡು ದಿಟ್ಟತನದಿಂದ ಭಗವನ್ಮಯ ಜೀವನವನ್ನು ಬದುಕಿದಳು.

ಹೀಗೆ ಶ್ರೀರಾಮಕೃಷ್ಣರು ಅನೇಕ ಸಾಧಕ-ಭಕ್ತೆಯರಿಗೆ ದಾರಿದೀಪವಾದರು, ಸಂಸಾರತಾಪದಿಂದ ನೊಂದು ಬಂದವರಿಗೆ ಶಾಂತಿಯ ಆಶ್ರಯವಾದರು; ಇಷ್ಟದೇವತೆಯಾಗಿ ಕೃಪೆಗೈದರು. ಕಾಳೀಪದನ ಪತ್ನಿ ಕೃಷ್ಣಭಾಮಿನಿ ದೇವಿ ಬಂದಾಗ ಅವಳನ್ನು ದೂರೀಕರಿಸದೆ ಸಹಾನುಭೂತಿಯಿಂದ ಆಕೆಯನ್ನು ಶ್ರೀಮಾತೆಯವರಲ್ಲಿಗೆ ಶ್ರೀರಾಮಕೃಷ್ಣರು ಕಳಿಸುತ್ತಾರೆ. ಗಿರೀಶ ಘೋಷನ ನಾಟಕವನ್ನು ನೋಡಲು ಹೋದಾಗಲೆಲ್ಲ ಅವನ ಕಂಪನಿಯ ಎಲ್ಲ ನಟಿಯರೊಡನೆ ಮಾತನಾಡುತ್ತಿದ್ದರು. ಸಮಾಜದಲ್ಲಿ ಅವರಿಗೆ ಅಂತಹ ಗೌರವವಿರದಿದ್ದರೂ ಅವರ ಅಸಹಾಯಕತೆಯನ್ನು ಕಂಡು, ಅವರ ಕಷ್ಟಸುಖಗಳಿಗೆ ಸ್ಪಂದಿಸುತ್ತಿದ್ದರು. ಚೈತನ್ಯನ ಪಾತ್ರವನ್ನು ವಹಿಸಿದಂತಹ ಬಿನೋದಿನಿ ದಾಸಿ ಎಂಬ ನಟಿ ಒಂದೆರೆಡು ಬಾರಿ ಶ್ರೀರಾಮಕೃಷ್ಣರಲ್ಲಿಗೆ ಬಂದು ಅವರ ಕೃಪಾಪಾತ್ರಳಾಗಿದ್ದಳು.

'ಕಾಮಿನಿ-ಕಾಂಚನ ತ್ಯಾಗ' ವನ್ನೇ ಸರ್ವದಾ ಒತ್ತಿ ಹೇಳಿದ ಪ್ರಭು ಶ್ರೀರಾಮಕೃಷ್ಣರು ಸ್ತ್ರೀಯರನ್ನು ದೂರೀಕರಿಸಲಿಲ್ಲ; ಬದಲಾಗಿ ಅವರಲ್ಲಿ ಜಗನ್ಮಾತೆಯನ್ನು ಕಂಡು ಆದರಿಸಿದರು. ಸ್ತ್ರೀಯರಲ್ಲಿ ಭಕ್ತಿಭಾವವನ್ನು, ಶುದ್ಧಶೀಲವನ್ನು ಜಾಗೃತಗೊಳಿಸಲು, ತನ್ಮೂಲಕ ಸುಭದ್ರ, ಸುಶೀಲ, ಶಾಂತಿಯುತ ಸಮಾಜ ನಿರ್ಮಾಣವಾಗಲು ತಾವು ಪ್ರಯತ್ನಿಸಿದುದಲ್ಲದೆ, ಶ್ರೀಮಾತೆ ಶ್ರೀಶಾರದಾ ದೇವಿಯವರ ಹಾಗೂ ಸ್ವಾಮಿ ವಿವೇಕಾನಂದರ ಮೂಲಕವೂ ಆ ಕಾರ್ಯವನ್ನು ಮಾಡಿಸಿದರು. ಸ್ಮಶಾನಸದೃಶವಾಗಿದ್ದ ಭಾರತ ವರ್ಷದಲ್ಲಿ ಅಮಂಗಲನಾಶಿನಿಯಾದ ಮಹಾಕಾಳಿಯನ್ನು ಜಾಗೃತಗೊಳಿಸಿ, ಭಕ್ತೆಯರ ಒಳ-ಹೊರಗಿನ ಕಠಿಣ ಹಾದಿಯನ್ನು ಸುಗಮಗೊಳಿಸಿದ್ದಾರೆ. "ನೀವು ಭಗವಂತನೆಡೆಗೆ ಒಂದು ಹೆಜ್ಜೆ ಇಟ್ಟರೆ, ಅವನು ಹತ್ತು ಹೆಜ್ಜೆ ನಿಮ್ಮ ಹತ್ತಿರ ಬರುತ್ತಾನೆ" ಎಂಬ ಭರವಸೆಯನ್ನು, ತಮ್ಮ ಜೀವನ-ಸಂದೇಶಗಳ ಮೂಲಕ ಹಾಗೂ ತಮ್ಮ ಭಕ್ತೆಯರ ಜೀವನದ ಉದಾಹರಣೆಗಳ ಮೂಲಕ ನೀಡಿದ್ದಾರೆ. ಅಲ್ಲದೆ, ಮಾವಿನ ತೋಟಕ್ಕೆ ಬಂದ ನಮ್ಮ ಕೆಲಸ ಮಾವಿನಹಣ್ಣನ್ನು ತಿನ್ನುವುದು ಎಂದು ಹೇಳಿ ಸಾರವತ್ತಾದುದರ ಕಡೆಗೆ ನಮ್ಮ ಗಮನವನ್ನು ಸೆಳೆಯುವುದರ ಮೂಲಕ ಆ ಹಾದಿಯಲ್ಲಿ ನಾವು ಹೆಜ್ಜೆಯಿಡುವಂತೆ ಕೃಪೆಗೈದಿದ್ದಾರೆ.

ಶ್ರೀರಾಮಕೃಷ್ಣರು ಜಗನ್ಮಾತೆಯ ಶಿಶು. ಈ ಭಾವದಿಂದಲೇ ತಮ್ಮ ಬಳಿಗೆ ಬಂದ ಭಕ್ತೆಯರನ್ನು ಕಂಡು, ಅವರನ್ನು ಅನುಗ್ರಹಿಸಿ ಆದರ್ಶವನ್ನು ಮೆರೆದಿದ್ದಾರೆ. ಭಕ್ತೆಯರನ್ನು ದೇವೀ ಸ್ವರೂಪರೆಂದು ಕಂಡು, ಅವರಲ್ಲಿನ ಆಧ್ಯಾತ್ಮಿಕ ಸುಪ್ತ ಶಕ್ತಿಯನ್ನು ಜಾಗೃತಗೊಳಿಸಿದ ಈ ದೈವೀಶಿಶುವಿನ ಚರಿತ್ರೆಯೇ ಮಂಗಳಕರ!